O.S. 61/2014
D.W 1

(ಸಾಕ್ಷಿಯನ್ನು ದಿನಾಂಕ: 29.06.2022 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)

**ಮುಂದುವರೆದ ಪಾಟೀ ಸವಾಲುಃ ಶ್ರೀ ಬಿ.ಆರ್.ಆರ್. ವಾದಿ ಪರ ವಕೀಲರಿಂದಃ**

ದಾವಾ ಆಸ್ತಿ ನನಗೆ ನನ್ನ ತಂದೆಯ ಕಡೆಯಿಂದ ಬಂದ ಕಾರಣ ಪಿತ್ರಾರ್ಜಿತ ಆಸ್ತಿ ಇರುತ್ತದೆ. 1995 ರಲ್ಲಿ ವಿಭಾಗ ಆದಾಗ ಅದು ಪೂರ್ವಜರ ಆಸ್ತಿ ಇರಲಿಲ್ಲ ಎಂದರೆ ಸರಿ. ಆದರೆ ಅದು ನನ್ನ ತಂದೆಯ ಹೆಸರಿನಲ್ಲಿತ್ತು. 1995 ರ ವಿಭಾಗದ ಪತ್ರದಲ್ಲಿ ದಾವಾ ಸ್ವತ್ತನ್ನು ಪಿತ್ರಾರ್ಜಿತ ಆಸ್ತಿ ಎಂದು ನಮೂದು ಮಾಡಿರುತ್ತೇವೆ ವಿನಹ ನಮ್ಮ ತಂದೆಗೆ ಕ್ರಯದ ಕರಾರು ಮೂಲಕ ಬಂದಿರುತ್ತದೆ ಎಂದು ನಮೂದು ಮಾಡಿರುವುದಿಲ್ಲ.

1995 ರಲ್ಲಿ ವಿಭಾಗ ಪತ್ರ ಮಾಡುವ ಸಂದರ್ಭದಲ್ಲಿ ಕ್ರಯದ ಕರಾರು ಪತ್ರ ನನ್ನ ಸ್ವಾಧೀನದಲ್ಲಿತ್ತು. 1995 ರಲ್ಲಿ ವಿಭಾಗವಾಗುವ ಸಮಯದಲ್ಲಿ ದಾವಾ ಸ್ವತ್ತಿನ ಕಂದಾಯ ದಾಖಲೆಗಳು ನಮ್ಮ ತಂದೆಯ ಹೆಸರಿಗೆ ಬದಲಾವಣೆಯಾಗಿರಲಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆಯ ಹೆಸರಿಗೆ ಕ್ರಯದ ಕರಾರು ಪತ್ರದ ಆಧಾರದ ಮೇರೆಗೆ ಕಂದಾಯ ದಾಖಲೆಗಳು ಬದಲಾವಣೆಯಾಗಿದ್ದವು. ನಮ್ಮ ತಂದೆ ತನ್ನ ಜೀವಿತ ಕಾಲದಲ್ಲಿ ಅಥವಾ ನನ್ನ ತಂದೆಯ ನಂತರ ನಾವು ಸದರಿ ಕ್ರಯದ ಕರಾರು ಪತ್ರದ ಆಧಾರದ ಮೇರೆಗೆ ಕ್ರಯ ಪತ್ರ ಆಗಬೇಕೆಂದು ದಾವೆಯನ್ನು ಸಲ್ಲಿಸಿರುವುದಿಲ್ಲ.

ಕಾಡೇಗೌಡ ನಮ್ಮ ಕುಟುಂಬದ ಮೂಲ ಪುರುಷ ಇರುತ್ತಾರೆ. ಕಾಡೇಗೌಡರಿಗೆ ತಿಮ್ಮಯ್ಯ, ಮಾಯಣ್ಣ, ಕೆಂಪಯ್ಯ ಮತ್ತು ತಿಮ್ಮಪ್ಪ ಎಂಬು ನಾಲ್ಕು ಜನ ಮಕ್ಕಳಿದ್ದರು ಎಂದರೆ ಸರಿ. ಕೆಂಪಯ್ಯ ಬಿನ್ ಕಾಡೇಗೌಡರ ಮಗ ಈ ದಾವೆಯ ಮೃತ ವಾದಿ ಎಂ.ಕೆ.ಕೆಂಪಕುಮಾರ್ ಇರುತ್ತಾರೆ ಎಂದರೆ ಸರಿ. ತಿಮ್ಮಪ್ಪ ಬಿನ್ ಕಾಡೇಗೌಡ ನನ್ನ ತಂದೆಯ ತಂದೆ ಇರುತ್ತಾರೆ. ವಾದಿ ನನಗೆ ನನ್ನ ತಾತನ ಸಹೋದರನ ಮಗ ಇರುತ್ತಾನೆ ಎಂದರೆ ಸರಿ.

ಕ್ರಯದ ಕರಾರು ಪತ್ರದಲ್ಲಿ ಅಥವಾ ಈ ದಾವೆಯ ಪ್ರತಿವಾದ ಪತ್ರದಲ್ಲಿ ನಮ್ಮ ಮತ್ತು

ಮೃತ ವಾದಿಯ ಸಂಬಂಧದ ಬಗ್ಗೆ ಎಲ್ಲೂ ನಮೂದು ಮಾಡಿರುವುದಿಲ್ಲ. ಮೃತ ಕೆಂಪಯ್ಯ ಬಿನ್ ಕಾಡೇಗೌಡರವರ ಅಂತ್ಯ ಸಂಸ್ಕಾರಕ್ಕೆ ನಾನು ಹೋಗಿರುವುದಿಲ್ಲ, ಆದರೆ ನಮ್ಮ ತಂದೆಯವರು ಹೋಗಿರುತ್ತಾರೋ ಇಲ್ಲವೊ ಎಂಬುದು ಗೊತ್ತಿಲ್ಲ. ಮೃತ ಕೆಂಪಯ್ಯ ಬಿನ್ ಕಾಡೇಗೌಡರವರ ಅಂತ್ಯ ಸಂಸ್ಕಾರಕ್ಕೆ ಹೋಗದೆ ಇರುವಷ್ಟು ದ್ವೇಷ ನಮ್ಮ ಕುಟುಂಬಕ್ಕೆ ಇತ್ತೊ ಇಲ್ಲವೊ ಎಂಬುದು ನನಗೆ ಗೊತ್ತಿಲ್ಲ. ಮೃತ ಕೆಂಪಯ್ಯ ಬಿನ್ ಕಾಡೇಗೌಡರವರ ಶವ ಸಂಸ್ಕಾರವನ್ನು ದಾವಾ ಸ್ವತಿನಲ್ಲಿ ಮಾಡಿರುವುದಿಲ್ಲ. ಅವರನ್ನು ಎಲ್ಲಿ ಊಳಲಾಗಿದೆ ಎಂದು ನನಗೆ ಗೊತ್ತಿಲ್ಲ. ಮೃತ ಕೆಂಪಯ್ಯ ಬಿನ್ ಕಾಡೇಗೌಡರವರನ್ನು ದಾವಾ ಸ್ವತ್ತಿನಲ್ಲಿ ಊಳಲಾಗಿದೆ ಎಂದರೆ ಸರಿಯಲ್ಲ. ನಾವುಗಳೆಲ್ಲ ಮೃತ ಕೆಂಪಯ್ಯ ಬಿನ್ ಕಾಡೇಗೌಡರವರನ್ನು ದಾವಾ ಸ್ವತ್ತಿನಲ್ಲಿ ಊಳುವಾಗ ಸಹಕಾರ ನೀಡಿ ಅಂತ್ಯ ಸಂಸ್ಕಾರ ಮಾಡಿರುತ್ತೇವೆ ಎಂದರೆ ಸರಿಯಲ್ಲ.

ಮೃತ ಕೆಂಪಯ್ಯ ಬಿನ್ ಕಾಡೇಗೌಡರವರು ಕ್ರಯದ ಕರಾರು ಪತ್ರ ಬರೆದುಕೊಡುವ ಸಮಯದಲ್ಲಿ ಅವರು ಯಾರ ಬಳಿ ಸಾಲ ಮಾಡಿದ್ದರು ಎಂದು ನನಗೆ ಗೊತ್ತಿಲ್ಲ. ಮೃತ ವಾದಿಯ ಸಹೋದರ ತಿಮ್ಮೇಶಪ್ರಭು ಬೆಂಗಳೂರಿನಲ್ಲಿ ವಕೀಲರಾಗಿರುತ್ತಾರೆ ಎಂದರೆ ಸರಿ. ಮಾಯಾರಾಜು ರವರು ಬೆಂಗಳೂರಿನ ಅವೆನ್ಯೂ ರಸ್ತೆಯಲ್ಲಿ ಸ್ವಂತ ಅಂಗಡಿ ಇಟ್ಟುಕೊಂಡು ವ್ಯಾಪಾರ ಮಾಡುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ರಾಮಕೃಷ್ಣ ರವರು ಬೆಂಗಳೂರಿನ ಮೈಕೋ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಪ್ರಸನ್ನಕುಮಾರ್ ಗಣಿ ಇಲಾಖೆಯಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

ಕ್ರಯದ ಕರಾರು ಪತ್ರವನ್ನು ಮೃತ ಕೆಂಪಯ್ಯರವರು ಬೆಂಗಳೂರಿನಿಂದ ಕುಣಿಗಲ್ ಗೆ ಬಂದು ಪತ್ರ ಬರೆದುಕೊಟ್ಟಿದ್ದರು. ಸದರಿ ಕ್ರಯದ ಕರಾರು ಪತ್ರಕ್ಕೆ ಮೃತ ಕೆಂಪಯ್ಯ ರವರು ಛಾಪಾ ಕಾಗದವನ್ನು ಬೆಂಗಳೂರಿನಿಂದಲೇ ತಂದಿರುತ್ತಾರೆ. ಕರಾರು ಪತ್ರ ಆಗುವ ಎಂಟು ದಿನಗಳ ಮುಂಚೆ ಕುಣಿಗಲ್ ನಲ್ಲಿ ಮೃತ ಕೆಂಪಯ್ಯ ಮತ್ತು ನನ್ನ ತಂದೆಯ ನಡುವೆ ವ್ಯವಹಾರದ ಮಾತುಕತೆಯಾಗಿತ್ತು. ಆ ದಿನ ಛಾಪ ಕಾಗದ ಲಭ್ಯವಿರದೇ ಇದ್ದ ಕಾರಣ ಎಂಟು

ದಿನಗಳ ನಂತರ ಕ್ರಯದ ಕರಾರು ಪತ್ರ ಬರೆಯಲಾಗಿರುತ್ತದೆ. ಕ್ರಯದ ಕರಾರಿನ ಮೊಬಲಗನ್ನು ಕ್ರಯದ ಕರಾರು ಪತ್ರವಾಗುವ ಎಂಟು ದಿನಗಳ ಮುಂಚೆ ಪಾವತಿ ಮಾಡಾಲಾಗಿತ್ತೊ ಅಥವಾ ಕ್ರಯದ ಕರಾರು ಪತ್ರ ಆದ ದಿನವೇ ಪಾವತಿ ಮಾಡಲಾಗಿತ್ತೊ ಎಂದು ನನಗೆ ಹೇಳಲಾಗುವುದಿಲ್ಲ.

1986 ರಲ್ಲಿ ಮೃತ ಕೆಂಪಯ್ಯ ರವರಿಗೆ ಸುಮಾರು 86 ವರ್ಷ ವಯಸ್ಸಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಮೃತ ಕೆಂಪಯ್ಯ ರವರನ್ನು ವಯಸ್ಸಾದ ಸಂದರ್ಭದಲ್ಲಿ ನಾನು ನೋಡಿರುವುದಿಲ್ಲ. ನಿ.ಡಿ.16 ದಾಖಲೆ ಆಗಿದೆ ಎಂದು ಹೇಳುವ ಸಂದರ್ಭದಲ್ಲಿ ಮೃತ ಕೆಂಪಯ್ಯ ರವರು ತನ್ನ ಯಾವ ಮಕ್ಕಳ ಜೊತೆ ವಾಸವಾಗಿದ್ದರು ಎಂದು ನನಗೆ ಗೊತ್ತಿಲ್ಲ. 1986 ರಲ್ಲಿ ಮೃತ ಕೆಂಪಯ್ಯನ ಎಲ್ಲಾ ಮಕ್ಕಳು ಚೆನ್ನಾಗಿ ದುಡಿದು ಸಂಪಾದನೆ ಮಾಡುತ್ತಿದ್ದು, ಮೃತ ಕೆಂಪಯ್ಯನವರಿಗೂ ಕೂಡ ಪಿಂಚಣಿ ಮತ್ತು ಸಾಕಷ್ಟು ಮನೆ ಬಾಡಿಗೆಗಳು ಬರುತ್ತಿದ್ದ ಕಾರಣ ಕನಿಷ್ಠ 10 ಸಾವಿರ ರೂಪಾಯಿಗಳಿಗೆ ದಾವಾ ಸ್ವತ್ತನ್ನು ಕ್ರಯದ ಕರಾರು ಮಾಡಿಕೊಡುವ ಅಗತ್ಯ ಇರಲಿಲ್ಲ ಎಂದರೆ ಸರಿಯಲ್ಲ. ನಿ.ಡಿ.16 ರಲ್ಲಿ ಎಂಟು ದಿನಗಳ ಹಿಂದ ವ್ಯವಹಾರ ಆಗಿತ್ತು ಮತ್ತು ಛಾಪ ಕಾಗದ ಇಲ್ಲದೇ ಇರುವ ಕಾರಣ ಎಂಟು ದಿನಗಳ ನಂತರ ಕ್ರಯದ ಕರಾರು ಪತ್ರ ಬರೆಯಲಾಗಿರಲಿಲ್ಲ ಎಂದರೆ ಸರಿ. 1986 ರಲ್ಲಿ ಕುಣಿಗಲ್ ಸಬ್ ರಿಜಿಸ್ಟರ್ ಕಛೇರಿ ಇತ್ತು, ಹುಲಿಯೂರುದುರ್ಗದಲ್ಲಿ ಸಬ್ ರಿಜಿಸ್ಟರ್ ಕಛೇರಿ ಇತ್ತೊ ಇಲ್ಲವೊ ಎಂದು ನನಗೆ ಗೊತ್ತಿಲ್ಲ.ಕುಣಿಗಲ್ ನಲ್ಲಿ 1986 ರಲ್ಲಿ ಛಾಪ ಕಾಗದ ಸಿಗುತ್ತಿದ್ದವು ಎಂದರೆ ಸರಿ.

ಕ್ರಯದ ಕರಾರು ಪತ್ರವನ್ನು ಬೆಟ್ಟೇಗೌಡ ಎಂಬ ಪತ್ರ ಬರಹಗಾರರ ಬರೆದಿರುತ್ತಾರೆ ಎಂದು ನನ್ನ ತಂದೆ ತಿಳಿಸಿರುತ್ತಾರೆ. ನಿ.ಡಿ.16 ರಲ್ಲಿ ಪತ್ರ ಬರಹಗಾರರ ಸೈಲೆನ್ಸ್ ನಂಬರ್ ಮತ್ತು ವಿಳಾಸ ಇರುವುದಿಲ್ಲ, ಸಹಿ ಇದೆ ಆದರೆ ಮೊಹರು ಸರಿಯಾಗಿ ಬಿದ್ದಿರುವುದಿಲ್ಲ. ನಿ.ಡಿ.16 ರ ಕೊನೆಯಲ್ಲಿ ದಿನಾಂಕಃ 20.06.1986 ಎಂದು ನಮೂದಾಗಿರುವುದು ಕ್ರಯದ ಕರಾರು ಪತ್ರದ ದಿನಾಂಕ ಇರುತ್ತದೆ. ಕ್ರಯದ ಕರಾರಿನ ಛಾಪ ಕಾಗದವನ್ನು

ದಿನಾಂಕಃ10.06.1986 ರಂದು ಖರೀದಿ ಮಾಡಿದ್ದಾಗಿ ನಮುದಾಗಿರುತ್ತದೆ ಎಂದರೆ ಸರಿ.

ನಿ.ಡಿ.1 ರ ದಾಖಲೆಯನ್ನು ಈ ದಾವೆಯಲ್ಲಿ ಯಾಕೆ ಹಾಜರುಪಡಿಸಿರುತ್ತೇನೆ ಎಂದು ನನಗೆ ಗೊತ್ತಿಲ್ಲ. ನನ್ನ ತಂದೆ ನನಗೆ ಕೊಟ್ಟಿದ್ದ ಕಾರಣ ಅದನ್ನುಹಾಜರುಪಡಿಸಿರುತ್ತೇನೆ. ನಿ.ಡಿ.1 ರ ದಾಖಲೆ ನನ್ನ ತಂದೆಯ ವಶಕ್ಕೆ ಹೇಗೆ ಬಂದಿರುತ್ತದೆಂದು ನನಗೆ ಹೇಳಲಾಗುವುದಿಲ್ಲ. ನಿ.ಡಿ.1 ರ ದಾಖಲೆಗೂ ಮತ್ತು ದಾವಾ ಸ್ವತ್ತಿಗೂ ಯಾವುದೇ ಸಂಬಂಧ ಇರುವುದಿಲ್ಲ. ದಾವಾ ಸ್ವತ್ತಿಗೆ ಸಂಬಂಧಸಿದಂತೆ ಕಂದಾಯ ದಾಖಲೆಗಳು ಬದಲಾವಣೆ ಮಾಡುವ ಪೂರ್ವದಲ್ಲಿ ಮೂಲ ಖಾತೆದಾರರಾದ ಮೃತ ಕೆಂಪಯ್ಯ ಬಿನ್ ಕಾಡೇಗೌಡರವರಿಗೆ ನೋಟಿಸನ್ನು ನೀಡಲಾಗಿತ್ತೊ ಇಲ್ಲವೊ ಎಂದು ನನಗೆ ಗೊತ್ತಿಲ್ಲ.

ದಾವಾ ಸ್ವತ್ತು ಮಳೆಯಾಶ್ರಿತ ಜಮೀನು ಇರುತ್ತದೆ. ದಾವಾ ಸ್ವತ್ತು ಮಾರ್ಕೊನಹಳ್ಳಿ ಡ್ಯಾಂ ನಿಂದ 200 ಮೀಟರ್ ದೂರದಲ್ಲಿ ಡ್ಯಾಂನ ಹಿಂಬದಿಯಲ್ಲಿರುತ್ತದೆ. 1986 ರಲ್ಲಿ ಮಾರ್ಕೊನಹಳ್ಳಿಯಲ್ಲಿ ಜಮೀನು 1 ಗುಂಟೆಗೆ 100 ರೂಪಾಯಿ ಬೆಲೆ ಇತ್ತು. ಕ್ರಯದ ಕರಾರು ಪತ್ರ ಬರೆದುಕೊಟ್ಟ ದಿನದಂದು ಹಕ್ಕು ಬದಲಾವಣೆ ಪತ್ರ ಮತ್ತು ಪಹಣಿ ಪತ್ರಗಳನ್ನು ಸಂಬಂಧಪಟ್ಟ ಕಛೇರಿಯಿಂದ ಪಡೆದುಕೊಂಡಿರದೇ ಇದ್ದ ಕಾರಣ ಕ್ರಯ ಪತ್ರವನ್ನು ಮುಂದಕ್ಕೆ ಬರೆದುಕೊಡುವುದಾಗಿ ತಿಳಿಸಿರುತ್ತಾರೆ. ಸದರಿ ಒಕ್ಕಣೆ ಕ್ರಯದ ಕರಾರು ಪತ್ರದಲ್ಲಿರುವುದಿಲ್ಲ. ನಿ.ಡಿ.16 ರಲ್ಲಿರುವ ಒಕ್ಕಣೆಯ ಪ್ರಕಾರ ಮೃತ ಕೆಂಪಯ್ಯ ಬಿನ್ ಕಾಡೇಗೌಡರವರ ಮನೆಯಲ್ಲಿ ಎಷ್ಟು ಜನ ಸದಸ್ಯರಿದ್ದರು ಎಂದು ನನಗೆ ಗೊತ್ತಿಲ್ಲ. ಮೃತ ಕೆಂಪಯ್ಯ ಬಿನ್ ಕಾಡೇಗೌಡರವರ ಕುಟುಂಬ ಸದಸ್ಯರ ಸಮ್ಮತಿಯನ್ನು ಪಡೆಯಲಾಗಿತ್ತೊ ಇಲ್ಲವೊ ಎಂದು ನನಗೆ ಗೊತ್ತಿಲ್ಲ.

1986 ರಲ್ಲಿ ಮೃತ ಕೆಂಪಯ್ಯ ಬಿನ್ ಕಾಡೇಗೌಡರವರಿಗೆ ತನ್ನ ಕುಟುಂಬ ಸದಸ್ಯರಿಗೆ ತಿಳಿಸದೇ ಕ್ರಯದ ಕರಾರು ಪತ್ರ ಮಾಡಿಕೊಡುವ ಪ್ರಮೇಯ ಇರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಸ್ವ-ಇಚ್ಛೆಯಿಂದ ಮುಂದುವರೆದು ದಾವಾ ಸ್ವತ್ತು ಮೃತ ಕೆಂಪಯ್ಯರವರ

ಸ್ವಯಾರ್ಜಿತ ಸ್ವತ್ತು ಆಗಿರುವ ಕಾರಣ ಅವರು ತನ್ನ ಮಕ್ಕಳ ಸಮ್ಮತಿ ಪಡೆಯುವ ಅಗತ್ಯ ಇರಲಿಲ್ಲ ಎಂದು ನುಡಿಯುತ್ತಾರೆ. ನಿ.ಡಿ.16 ರಲ್ಲಿ ಸರ್ಕಾರದಿಂದ ಮಂಜೂರಾದ ಆಸ್ತಿ ಇರುತ್ತದೆ ಎಂದು ನಮೂದಾಗಿರುತ್ತದೆ ಎಂದರೆ ಸರಿ. ನಿ.ಡಿ.16 ರಲ್ಲಿ ಸ್ವಯಾರ್ಜಿತ ಆಸ್ತಿ ಎಂದು ಎಲ್ಲೂ ನಮುದಾಗಿರುವುದಿಲ್ಲ ಎಂದರೆ ಸರಿ.

ಮೃತ ಕೆಂಪಯ್ಯ ಬಿನ್ ಕಾಡೇಗೌಡರ ಶವ ಸಂಸ್ಕಾರವನ್ನು ಮತ್ತು ಆನಂತರ ಆತನ ಮೃತ ಮಕ್ಕಳ ಶವ ಸಂಸ್ಕಾರಗಳನ್ನು ಕೂಡ ದಾವಾ ಸ್ವತ್ತಿನಲ್ಲಿಯೇ ಮಾಡಲಾಗಿರುತ್ತದೆ ಎಂದರೆ ಸರಿಯಲ್ಲ. ಮಂಜೂರಾತಿ ದಾಖಲೆಯಲ್ಲಿ ಪರಭಾರೆ ಮಾಡಬಾರದು ಎಂಬ ಷರತ್ತು ಇರುವುದನ್ನು ಕ್ರಯದ ಕರಾರು ಪತ್ರದ ಒಕ್ಕಣೆಯಲ್ಲಿ ನಮೂದು ಮಾಡಿರುವುದಿಲ್ಲ. 1986 ರಲ್ಲಿ ಮಂಜೂರಾತಿಯಾದ ಜಮೀನಿನ್ನು ಪರಭಾರೆ ಮಾಡಬಾರದೆಂಬ ಷರತ್ತು ಇದ್ದ ಕಾರಣ ಮೃತ ಕೆಂಪಯ್ಯ ಬಿನ್ ಕಾಡೇಗೌಡರವರಿಗೆ ಕ್ರಯದ ಕರಾರು ಪತ್ರ ಮಾಡಲು ಅಧಿಕಾರವೇ ಇರಲಿಲ್ಲ ಎಂದರೆ ಸರಿಯಲ್ಲ.

ನಿ.ಡಿ.16 ರ ದಾಖಲೆಗೆ ಮೃತ ಕೆಂಪಯ್ಯ ಬಿನ್ ಕಾಡೇಗೌಡರವರು ಸಹಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಆತನ ಅನುಪಸ್ಥಿತಿಯಲ್ಲಿ ನಿ.ಡಿ.16 ರ ದಾಖಲೆಯನ್ನು ಮತ್ತು ಅವರ ಸಹಿಗಳನ್ನು ಸೃಷ್ಟಿ ಮಾಡಲಾಗಿದೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ಮೃತ ಕೆಂಪಯ್ಯ ಬಿನ್ ಕಾಡೇಗೌಡರವರ ಸ್ವಾಧೀನದಲ್ಲಿ ನಂತರ ಆತನ ಮಕ್ಕಳ ಸ್ವಾದೀನದಲ್ಲಿದ್ದು ಅದು ಮಾರ್ಕೋನಹಳ್ಳಿ ಡ್ಯಾಂ ಹತ್ತಿರ ಇರುವ ಕಾರಣ ಅದರ ಬೆಲೆ ಹೆಚ್ಚು ಇರುವ ಕಾರಣ ಅದನ್ನು ಅಕ್ರಮವಾಗಿ ಪಡೆಯಬೇಕೆಂಬ ಉದ್ದೇಶದಿಂದ ನಿ.ಡಿ.16 ರ ದಾಖಲೆಯನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಮೃತ ಕೆಂಪಯ್ಯ ರವರು ಬೆಂಗಳೂರಿನಲ್ಲಿ ವಾಸವಾಗಿದ್ದ ಕಾರಣ ವ್ಯವಸಾಯ ಕೆಲಸಗಳಿಗೆ ನಮ್ಮ ಸಹಾಯ ಪಡೆಯುತ್ತಿದ್ದುದನ್ನು ದುರುಪಯೋಗಪಡಿಸಿಕೊಂಡು ನಾವು ನಿ.ಡಿ.16 ರ ದಾಖಲೆಯನ್ನು ಸೃಷ್ಟಿ ಮಾಡಿಕೊಂಡು ಸದರಿ ಜಮೀನನ್ನು ಪಡಯಬೇಕೆಂಬ ಉದ್ದೇಶ ಹೊಂದಿರುತ್ತೇವೆ ಎಂದರೆ ಸರಿಯಲ್ಲ. ನಾವು ವಾದಿ ಕೆಂಪಕುಮಾರ್ ರವರಿಗೆ ದಾವಾ ಸ್ವತ್ತಿನ ಹಕ್ಕನ್ನು ಪ್ರಶ್ನೆ

ಮಾಡಿದ್ದ ಕಾರಣ ಈ ದಾವೆಯನ್ನು ಸಲ್ಲಿಸಲು ವ್ಯಾಜ್ಯ ಕಾರಣ ಆಗಿರುತ್ತದೆ ಎಂದರೆ ಸರಿಯಲ್ಲ. ಅಕ್ರಮವಾಗಿ ದಾವಾ ಸ್ವತ್ತನ್ನು ಹೊಡೆಯಬೇಕೆಂಬ ಉದ್ದೇಶದಿಂದ 1995 ರ ನೋಂದಣಿ ವಿಭಾಗ ಪತ್ರದಲ್ಲಿ ದಾವಾ ಸ್ವತ್ತನ್ನು ಸೇರಿಸಲಾಗಿರುತ್ತದೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಶ್ರೀ ಎ.ಆರ್.ಆರ್. ಪ್ರತಿವಾದಿಗಳ ಪರ ವಕೀಲರಿಂದಃ**

ದಾವಾ ಸ್ವತ್ತಿನ ಒಂದು ಕಡೆಗೆ ರಸ್ತೆ ಇದ್ದು ಸದರಿ ರಸ್ತೆಯನ್ನು ಈಗ್ಗೆ 30 ವರ್ಷಗಳಿಂದೀಚೆಗೆ ಮಾಡಲಾಗಿರುತ್ತದೆ.

**ಮುಂದುವರೆದ ಪಾಟೀ ಸವಾಲುಃ ಶ್ರೀ ಬಿ.ಆರ್.ಆರ್. ವಾದಿ ಪರ ವಕೀಲರಿಂದಃ**

1995 ರಲ್ಲಿ ನೋಂದಣಿ ವಿಭಾಗವಾದ ಸಮಯದಲ್ಲಿ ಸದರಿ ರಸ್ತೆ ಮಾಡಲಾಗಿರುತ್ತದೆ, ಆ ಬಗ್ಗೆ ವಿಭಾಗ ಪತ್ರದಲ್ಲಿ ನಮೂದು ಇರುತ್ತದೆ. ನಿ.ಡಿ.16 ರ ಚಕ್ಕುಬಂದಿಗೂ ಮತ್ತು ದಾವಾ ಸ್ವತ್ತಿನ ಚಕ್ಕುಬಂದಿಗೂ ಹೋಲಿಕೆ ಇರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಇದೆ

*ಸಹಿ/-*
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ,
ಕುಣಿಗಲ್.